ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ.—(ಅ) ಗೆ ಉತ್ತರವಾಗಿ 'ಇಲ್ಲ' ವೆಂದು ಹೇಳಿದೆ. ಸೂಪರಿಂಟೆಂಡಿಂಗ್ ಇಂಜನಿಯರ್ ಅವರಿಗೆ ನಾನು ಈ ವಿಚಾರವನ್ನು ಬರದಿದ್ದೇನೆ. ಅಲ್ಲದೆ ಹಾರೂರು ಮತ್ತು ಕಪ್ಪತಗೇಡು ಈ ಎರಡು ಪ್ರದೇಶಗಳಲ್ಲಿ ಉಪ್ಪು ನೀರು ಒಳಗೆ ಬಂದು ಬೆಳೆ ನಾಶವಾಗಿ ಹೋಗಿದೆಯೆಂಬುದಾಗಿ ಅವರಿಗೆ ತಿಳಿಸಿದರೂ ಇಮವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣವೇನು ?

Sri D. PARAMESHWARAPPA.—So far no representation has been made to Government direct, but my friend says that some complaint or representation was made to the Executive Engineer or Superintending Engineer. But according to the information furnished to Government, no damage has been caused.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಾರೆ. ಮಾನ್ಯ ಸದಸ್ಯರು ಈ ವಿಚಾರವನ್ನು ಸೂಪರಿಂಟೆಂಡಿಂಗ್ ಇಂಜನಿಯರ್ ಅವರ ಗಮನಕ್ಕೆ ತಂದು ಒಂದು ಪತ್ರದ ಮೂಲಕ ಅವರಿಗೆ ತಿಳಿಸಿದರೆ, ಅದು ನಿಮ್ಮ ಗಮನಕ್ಕೆ ಬಂದಂತಾಗುವುದಿಲ್ಲವೇ ? ಅವರು ಸರ್ಕಾರಕ್ಕೆ ಸಂಬಂಧಪಟ್ಟವರಾಗಿದ್ದಾರೋ ಇಲ್ಲವೋ ?

ಶ್ರೀ ಡಿ. ಪರಮೇಶ್ವರಪ್ಪ.—ನಾನು ಹೇಳಿದ್ದು ಇವರು ಫಾರೋ ಮಾಡಲಿಲ್ಲ. ಸರ್ಕಾರಕ್ಕೆ ನೇರವಾಗಿ ಆ ಬಗ್ಗೆ ಯಾವ ಮನವಿಯೂ ಬಂದಿಲ್ಲ. I do not deny that Executive Engineer or Superintending Engineer are part of the Government. They have sent information that no representation has been made. If at all my friend wants to challenge, let him give the date of his representation. I shall enquire into the matter.

ಶ್ರೀ ಎಸ್. ಜಯಪ್ರಕಾಶ್ ಶೆಟ್ಟಿ.—ನಿಮ್ಮ ಗಮನಕ್ಕೆ ತಂದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

Sri D. PARAMESWARAPPA.—Necessary action will be taken.

ಶ್ರೀ ಬಿ. ಎಂ. ಇದಿನಬ್ಬ.—ಅನೇಕ ಕಡೆಗಳಲ್ಲಿ ಉಪ್ಪು ನೀರು ಬಂದು ಬೆಳೆ ಹಾಳಾಗಿರುವ ವಿಷಯ ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಮುಂದೆ ಈ ರೀತಿ ಆಗದ ಹಾಗೆ ಸರಿಯಾದ ಆದೇಶವನ್ನು ಕೊಟ್ಟು ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

Sri D. PARAMESWARAPPA.—It may so happen that the information furnished by the officer may be wrong. I do not deny, but in all such cases I would only suggest that it is desirable that spot inspection is held and we are convinced about the matter.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಇದರಿಂದ ಸಾವಿರಾರು ಎಕರೆಗಳಷ್ಟು ಬೆಳೆ ನಷ್ಟವಾಗಿರುವುದರಿಂದ, ಇದರ ಮೇಲೆ ಇರತಕ್ಕ ಕಂದಾಯವನ್ನು ರದ್ದುಮಾಡುತ್ತೀರಾ ?

Sri D. PARAMESWARAPPA.—If the Government are satisfied fully that crops are damaged, certainly we will be sympathetic.

Repayment of Loan by the Ranibennur T. A. P. C. M. Society to District Co-operative Bank, Dharwar.

562. Sri N. L. BELLAD (Ranibennur).—

Will the Minister for Development be pleased to state :—

(*a*) the amount of loan to be repaid to District Co-operative Bank (K. C. C. Bank) Dharwar at present by the Ranibennur Taluk Agricultural Produce Co-operative Marketing Society ;

(*b*) the various purposes for which the amount has been taken from the District Bank together with the amount taken for each item ?

Sri B. L. GOWDA (Deputy Minister for Co-operation).—

(*a*) There is no amount of loan remaining to be repaid.

(*b*) Loan has been obtained as follows :—

Sl. No.	Purpose of loan	The extent of loan sanctioned	The loan amount obtained
1	2	3	4
		Rs.	Rs.
1	C. C. Loan.	1,00,000	1,00,000
2	Godown loan (Procurement)	1,00,000	97,000
3	Godown loan (Cotton)	1,00,000	50,000
4	Godown Loan (Except Cotton)	1,00,000	50,000

ಶ್ರೀ ಎನ್. ಎಲ್. ಬೆಲ್ಲದ.—ಈ ಸೊಸೈಟಿಯವರು ಜಿಲ್ಲಾ ಬ್ಯಾಂಕಿಗೆ ಏನು ಹಣವನ್ನು ಮರುಪಾವತಿ ಮಾಡಿದ್ದಾರೋ ಆ ಹಣ ಸ್ವೀಟ್ ಮಾರ್ಕೆಟಿಂಗ್ ಸೊಸೈಟಿಗೆ ಗೊಬ್ಬರ ಮಾರಾಟ ಮಾಡಿ ಬಂದುದು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

†ಶ್ರೀ ಬಿ. ಎಲ್ ಗೌಡ.—ಗೊಬ್ಬರ ಮಾರಾಟ ಮಾಡಿ ಬಂದುದೋ ಅಥವಾ ಯಾವ ಮೂಲಕ ಬಂದುದು ಎಂಬುದು ಗೊತ್ತಿಲ್ಲ.

Sri SIDDAIAH KASHIMATH.—May I know whether the loan sanctioned to this society has been utilized for the purpose ?

Sri B. L. GOWDA.—Yes, it has been utilized for the same purpose for which it was borrowed.

ಶ್ರೀ ವಿ. ಎಲ್. ಶಿವಪ್ಪ.—ನನ್ನ ಒಂದು ಪ್ರಶ್ನೆಗೆ ಉತ್ತರವಾಗಿ ಸಾಲ ಕೊಟ್ಟಿರತಕ್ಕದ್ದು, ಮರು ಪಾವತಿ ಮಾಡಿರತಕ್ಕದ್ದು ಎಷ್ಟು ಎಂಬುದು ಗೊತ್ತಿಲ್ಲವೆಂದು ಹೇಳಿದ್ದಾರೆ. ಅಂದಮೇಲೆ ಆ ಸೊಸೈಟಿ ಏನಾದರೂ ಇದೆಯೇ ? ಇಲ್ಲವೇ ? ಇಷ್ಟು ಲಕ್ಷಾಂತರ ರೂಪಾಯಿಗಳನ್ನು ಒಂದೇ ಸೊಸೈಟಿಗೆ ಕೊಟ್ಟಿರುವಾಗ ಆ ಹಣ ವಾಪಸ್ಸು ಬರುತ್ತದೆಯೇ ? ಅವರ ಆಸ್ತಿ ಭದ್ರವಾಗಿದೆಯೇ ?

ಶ್ರೀ ಬಿ. ಎಲ್. ಗೌಡ.—ಪ್ರಶ್ನೆ ಹಾಕಿರುವುದು ಧಾರವಾಡ ಜಿಲ್ಲೆಗೆ ಸಂಬಂಧಪಟ್ಟುದು. ಧಾರವಾಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ 2 ಲಕ್ಷ 97 ಸಾವಿರ ರೂಪಾಯಿಗಳನ್ನು ವ್ಯವಸಾಯದ ಬಾಬುಗಳಿಗೆ ಸಾಲವಾಗಿ ಕೊಟ್ಟಿದ್ದಾರೆ. ಅವರು ಎಲ್ಲಾ ಸಾಲವನ್ನು ವಾಪಸ್ಸು ಮಾಡಿದ್ದಾರೆ.

ಶ್ರೀ ಕೆ. ಎಂ. ತಮ್ಮಯ್ಯ.—ಈ ಸಾಲವನ್ನು ಪಡೆಯುವಾಗ ಒಂದು ಕೆಲಸ ಮಾಡುತ್ತೇವೆಂದು ಪಡೆದು ಅದಕ್ಕೆ ಉಪಯೋಗಿಸದೆ ಬೇರೆದಕ್ಕೆ ಉಪಯೋಗಿಸಿದರೆ ಸರ್ಕಾರದವರು ಏನು ಕ್ರಮ ತೆಗೆದು ಕೊಳ್ಳುತ್ತಾರೆ ?

†Indicates that remarks or speeches have not been revised by the member concerned.

ಶ್ರೀ ಬಿ. ಎಲ್. ಗೌಡ.—ಯಾವ ತರಹ ದುರುಪಯೋಗಮಾಡುತ್ತಾರೋ ಅದನ್ನು ತಿಳಿದು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಎಲ್. ಬೆಲ್ಲದ.—ಸೊಸೈಟಿ ದಿವಾಳಿತನದಲ್ಲಿದ್ದರೆ ಕೊಟ್ಟ ಸಾಲ ಬ್ಯಾಂಕಿಗೆ ವಾಪಸ್ಸು ಬರುವುದಿಲ್ಲ. ಅದ್ದರಿಂದ ಜಿಲ್ಲಾ ಬ್ಯಾಂಕಿಗೆ ಹಣ ಕೊಡಬೇಕೆಂದು ಒತ್ತಾಯ ಮಾಡುತ್ತೀರಾ ?

ಶ್ರೀ ಬಿ. ಎಲ್ ಗೌಡ.—ಸೊಸೈಟಿ ದಿವಾಳಿತನಕ್ಕೆ ಬರುವುದು ಅದು ಅವರ ಅಭಿಪ್ರಾಯ. ಸಾಲ ಕೊಟ್ಟಮೇರೆ ಅದನ್ನು ವಾಪಸ್ಸು ಮಾಡಬೇಕು ಸಾಲ ಮರು ಪಾವತಿ ಮಾಡದೆ ಇರುವುದು ನಿಯಮವಲ್ಲ. ಮಾನ್ಯ ಸದಸ್ಯರು ಹೇಳುವುದು ಅದು ಒಂದು ಊಹಾಪೋಹದ ಮಾತು.

Execution of "Kudre Gundihalla" or "Addahalla" project in 'Hullahalli' Hobli

636. **Sri L. SRIKANTAIAH** (Nanjangud).—

Will the Minister for Public Works be pleased to state :—

(a) whether any project by name Kudre Gundihalla' or 'Addahalla' near Ediyala Village, Hullahalli Hobli, Nanjangud Taluk was surveyed by the Department in between the years 1955-64 ;

(b) if so, whether the execution of the said project has been taken up ;

(c) whether the execution and completion of the said project would not only provide irrigational facilities but also serve as a buffer reservoir for the Nugu project ;

(d) the amount sanctioned so far and the amount spent for the above project ;

(e) the irrigational capacity of the said project and the number of acres of land that would come in its command under wet cultivation ?

Sri D. PARAMESWARAPPA (Deputy Minister for Major Irrigation and Electricity) [On behalf of SRI A. J. DODDAMETI (Minister of State for Minor Irrigation)].—

(a) Yes.

(b) No.

(c) The project is still under investigation.

(d) Nil.

(e) Does not arise in view of reply to (c) above.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರವನ್ನು ನಾನು ನೋಡಿದ್ದೇನೆ. ಈ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕಾದರೆ ಮಾರ್ಗಗಳು ಏನು, ಯಾರಿಗೆ ಯಾವ ರೀತಿ ಪ್ರೆಶರ್ ಹಾಕಬೇಕು, ಆ ಮಾರ್ಗಗಳನ್ನು ಹೇಳಿ ಕೊಡುತ್ತೀರಾ ?

Sri D. PARAMESWARAPPA:—I hope my hon. friend knows the steps to bring pressure on the concerned officers. The estimate was prepared for Rs. 10 lakhs for the Kudre Gundihalla tank but later on